## <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ಕೈಗಾರಿಕಾ ನಿವೇಶನಕ್ಕೆ ಹಾಲಿ ನೀಡುತ್ತಿರುವ ಸಹಾಯಧನವನ್ನು ಶೇಕಡ 50 ರಿಂದ ಶೇಕಡ 75ಕ್ಕೆ ಹೆಚ್ಚಿಸಿ ಜಾರಿಗೊಳಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ: ಸಿಐ 81 ಸಿ ಎಸ್ ಸಿ 2016, ದಿನಾಂಕ:27.06.2016.
2. ಸರ್ಕಾರದ ಉಪ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ, ರವರ ಅನಧಿಕೃತ ಟಿಪ್ಪಣಿ ದಿನಾಂಕ:01.07.2019 ದೊಂದಿಗೆ ಲಗತ್ತಿಸಲಾದ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಅನುಸೂಚಿತ ಬುಡಕಟ್ಟುಗಳ ಉಪಹಂಚಿಕೆ(ಯೋಜನೆ ರೂಪಿಸುವುದು,ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು .ಬಳಕೆ) ಅಧಿನಿಯಮ-2013 ರ ಪ್ರಕಾರ ದಿನಾಂಕ:04.06.2019 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳ/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಗಳು.
3. ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ), ಸಮಾಜ ಕಲ್ಯಾಣ ಇಲಾಖೆ ರವರ ಅನಧಿಕೃತ ಟಿಪ್ಪಣಿ ದಿನಾಂಕ:23.07.2019
4. ದಿನಾಂಕ 20-08-2019 ರಂದು ನಿರ್ದೇಶಕರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
5. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-1 ಮತ್ತು ಬಂ.ಹೂ), ಆರ್ಥಿಕ ಇಲಾಖೆ ರವರ ಟಿಪ್ಪಣಿ ಸಂಖ್ಯೆ: FD 196 EXP-1/19, ದಿನಾಂಕ: 04.01.2019.
6. ಸರ್ಕಾರದ ಅಧೀನ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ ರವರ ಅ.ಟಿ. ಸಂಖ್ಯೆ: ಸಕಇ 23 ಎಸ್‌ಎಲ್ ಪಿ 2020 ದೊಂದಿಗೆ ಲಗತ್ತಿಸಲಾದ ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 19.03.2020 ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನಗಳನ್ನು ಹಾಲಿ ಇರುವ ಸಹಾಯಧನ ಮಿತಿಯನ್ನು ಶೇಕಡ 50 ರಿಂದ ಶೇಕಡ 75ಕ್ಕೆ ಹೆಚ್ಚಿಸುವ ಬಗ್ಗೆ ನಡೆದ ಸಭಾ ನಡವಳಿಗಳು.

*****

<u>**ಪ್ರಸ್ತಾವನೆ:**</u>

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ 2016-17 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿರುವಂತೆ ಪರಿಶಿಷ್ಟ ಜಾತಿ/ಪಂಗಡದ ಉದ್ಯಮಿಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆ.ಎಸ್.ಎಸ್.ಐ.ಡಿ.ಸಿ) ಸಂಸ್ಥೆಗಳಿಂದ ಕೈಗಾರಿಕಾ ನಿವೇಶನ/ಮಳಿಗೆಗಳನ್ನು ಶೇ.50 ರ ರಿಯಾಯಿತಿ ದರದಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಡಿಸಿ ಹಂಚಿಕೆ ಮಾಡಲು ಅನುಮೋದನೆ ನೀಡಲಾಗಿದೆ.

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನ/ಮಳಿಗೆಯ ಶೇ.50 ರ ರಿಯಾಯಿತಿ ಮೌಲ್ಯವನ್ನು ಸರ್ಕಾರದಿಂದ ಸಂಬಂಧಿಸಿದ ಸಂಸ್ಥೆಗಳಿಗೆ (ಕೆ.ಎಸ್.ಎಸ್.ಐ.ಡಿ.ಸಿ/ಕೆ.ಐ.ಎ.ಡಿ.ಬಿ) ಪಾವತಿ ಮಾಡುವುದು.

- ಈ ಶೇ.50ರ ರಿಯಾಯಿತಿ ಮೌಲ್ಯವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ (SCSP/TSP) ಅಡಿಯಲ್ಲಿ ಹಂಚಿಕೆಯಾಗುವ ಆಯವ್ಯಯದಿಂದ ಭರಿಸತಕ್ಕದ್ದು ಮತ್ತು (SCSP/TSP) ಯೋಜನೆಯಡಿಯಲ್ಲಿ ಈ ಕಾರ್ಯಕ್ರಮಕ್ಕೆ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

- ಹಂಚಿಕೆ ಪಡೆದ ಉದ್ದಿಮೆದಾರರಿಂದ ನಿವೇಶನ/ಮಳಿಗೆಯ ಶೇ.25ರಷ್ಟು ಮೌಲ್ಯವನ್ನು ಮೊದಲು (Upfront) ಸಂಬಂಧಿಸಿದ ಸಂಸ್ಥೆಗಳು ಪಡೆದುಕೊಳ್ಳತಕ್ಕದ್ದು. ನಂತರ, ಉಳಿದ ಶೇ.25 ರಷ್ಟು ನಿವೇಶನ/ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಸೂಕ್ತ ಬಡ್ಡಿ ದರದೊಂದಿಗೆ ವಸೂಲಾತಿ ಮಾಡಿಕೊಳ್ಳತಕ್ಕದ್ದು.

**ಮೇಲೆ ಓದಲಾದ ಕ್ರಮ ಸಂಖ್ಯೆ (2) ರ** ಸರ್ಕಾರದ ಉಪ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ, ರವರ ಅನಧಿಕೃತ ಟಿಪ್ಪಣಿಯೊಂದಿಗೆ ಲಗತ್ತಿಸಲಾಗಿರುವ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟುಗಳ ಉಪಹಂಚಿಕೆ (ಯೋಜನೆ ರೂಪಿಸುವುದು,ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013 ರ ಪ್ರಕಾರ ದಿನಾಂಕ: 04.06.2019 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳ/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಗಳಲ್ಲಿ ಕೈಗಾರಿಕಾ ನಿವೇಶನ ನೀಡುವಲ್ಲಿ ಹಾಲಿ ಇರುವ ಸಹಾಯಧನ ಮಿತಿಯನ್ನು ಶೇ.50 ರಿಂದ ಶೇ.75 ಕ್ಕೆ ಹೆಚ್ಚಿಸಲು ಅನುಮೋದನೆ ನೀಡಲಾಗಿದೆ.

**ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಅನಧಿಕೃತ ಟಿಪ್ಪಣಿಯಲ್ಲಿ ವಿವರಿಸಲಾಗಿರುವಂತೆ,** ಪರಿಶಿಷ್ಟ ಜಾತಿ/ಪಂಗಡದ ಅನೇಕ ನಿರುದ್ಯೋಗಿ ಯುವಕ/ಯುವತಿಯರು ನಿವೇಶನ ಮಂಜೂರಾಗಿದ್ದರೂ ಸಹ ಹಣವನ್ನು ಪಾವತಿಸಲು ಸಾಧ್ಯವಾಗುವುದಿಲ್ಲವೆಂದು ಕೋರಿ ಕೆಲವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಾಸಕರು ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದು, ಸದರಿ ಸೌಲಭ್ಯವನ್ನು 2018-19 ನೇ ಸಾಲಿನಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಲು ಆದೇಶ ಹೊರಡಿಸಲು ಕೋರಲಾಗಿರುತ್ತದೆ.

**ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ** ದಿನಾಂಕ: 20.08.2019 ರಂದು ನಿರ್ದೇಶಕರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನ ನೀಡುವಲ್ಲಿ ಹಾಲಿ ಇರುವ ಸಹಾಯಧನ ಮಿತಿಯನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳೊಂದಿಗೆ ಶೇ.50% ರಿಂದ ಶೇ 75%ಕ್ಕೆ ಹೆಚ್ಚಿಸಿ ಜಾರಿಗೊಳಿಸುವ ಕುರಿತಂತೆ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ:

- ಒಬ್ಬ ಉದ್ಯಮಿಗೆ ಒಂದು ಬಾರಿಗೆ ಮಾತ್ರ ಗರಿಷ್ಠ 2 ಎಕರೆ ಕೈಗಾರಿಕಾ ನಿವೇಶನಕ್ಕೆ ಶೇ.75 ರಂತೆ ರಿಯಾಯಿತಿ ದರದಲ್ಲಿ ಜಿಲ್ಲೆಗಳಲ್ಲಿ ಹಂಚಿಕೆ ಮಾಡಬಹುದು. ಆದರೆ, ಬೆಂಗಳೂರು (ನಗರ) ಮತ್ತು ಬೆಂಗಳೂರು (ಗ್ರಾಮಾಂತರ) ಜಿಲ್ಲೆಗಳಲ್ಲಿ ಭೂಮಿಯ ಬೆಲೆಯು ದುಬಾರಿಯಾಗುವುದರಿಂದ ಗರಿಷ್ಠ 1 ಎಕರೆ ಕೈಗಾರಿಕಾ ನಿವೇಶನಕ್ಕೆ ಸೀಮಿತಗೊಳಿಸಿದಂತೆ ರಿಯಾಯಿತಿ ದರವನ್ನು ಪರಿಗಣಿಸುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನಗಳನ್ನು ಮೂಲಭೂತ ಸೌಕರ್ಯ ಕಲ್ಪಿಸಿ ಪೂರ್ಣ ಪ್ರಮಾಣದಲ್ಲಿ ಉದ್ದಿಮೆ ಸ್ಥಾಪನೆಗೆ ಗರಿಷ್ಠ 3 ವರ್ಷಗಳ ಕಾಲ ಅವಕಾಶ ನೀಡುವುದು.
- ಉದ್ದಿಮೆಯನ್ನು ಯಾವುದೇ ಸಂವಿಧಾನದಡಿ ಸ್ಥಾಪಿಸಿದಲ್ಲಿ ಎಲ್ಲಾ ಸ್ಥಾಪಕರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.
- ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ ನಂತರ ನಿವೇಶನವನ್ನು ಫಲಾನುಭವಿಗೆ ಸ್ವಾಧೀನ ಪತ್ರದ ಮೂಲಕ ನೀಡಿ ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ನಿಗಮ ಹಾಗೂ ಮಂಡಳಿಯು ಫಲಾನುಭವಿಯಿಂದ ಪಡೆಯುವುದು.
- ಸದರಿ ನಿಯಮಾವಳಿಯಂತೆ ಕೈಗಾರಿಕಾ ನಿವೇಶನವನ್ನು 10 ವರ್ಷಗಳ ಅವಧಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಸ್ವಾಧೀನ ನೀಡಲಾಗುತ್ತಿದ್ದು, ಇದನ್ನು 12 ವರ್ಷಗಳ ಅವಧಿಗೆ ವಿಸ್ತರಿಸಿ ನಿಗಧಿಪಡಿಸುವುದು.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ **ಅನಧಿಕೃತ ಟಿಪ್ಪಣಿಯಲ್ಲಿ ಲಗತ್ತಿಸಿರುವ** ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 19.03.2020 ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನಗಳನ್ನು ಹಾಲಿ ಇರುವ ಸಹಾಯಧನ ಮಿತಿಯನ್ನು ಶೇಕಡ 50 ರಿಂದ ಶೇಕಡ 75ಕ್ಕೆ ಹೆಚ್ಚಿಸುವ ಬಗ್ಗೆ ನಡೆದ ಸಭಾ ನಡವಳಿಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿರುತ್ತದೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಐ 76 ಸಪ್ರಕೈ 2019, ಬೆಂಗಳೂರು, ದಿನಾಂಕ: 28.05.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೈಗಾರಿಕಾ ನಿವೇಶನ ನೀಡುವಲ್ಲಿ ಹಾಲಿ ಇರುವ ಸಹಾಯಧನವನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳೊಂದಿಗೆ ಶೇಕಡ 50 ರಿಂದ ಶೇಕಡ 75 ಕ್ಕೆ ಹೆಚ್ಚಿಸಿ ಜಾರಿಗೊಳಿಸಲಾಗಿದೆ:

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನಗಳನ್ನು ಮೂಲಭೂತ ಸೌಕರ್ಯ ಕಲ್ಪಿಸಿ ಪೂರ್ಣ ಪ್ರಮಾಣದಲ್ಲಿ ಉದ್ದಿಮೆ ಸ್ಥಾಪನೆಗೆ ಗರಿಷ್ಠ 3 ವರ್ಷಗಳ ಕಾಲಾವಕಾಶ ನೀಡುವುದು.

2. ಉದ್ದಿಮೆಯನ್ನು ಯಾವುದೇ ಸಂವಿಧಾನದಡಿ ಸ್ಥಾಪಿಸಿದಲ್ಲಿ ಎಲ್ಲಾ ಸ್ಥಾಪಕರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು.

3. ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ ನಂತರ ನಿವೇಶನವನ್ನು ಫಲಾನುಭವಿಗೆ ಸ್ವಾಧೀನ ಪತ್ರದ ಮೂಲಕ ನೀಡಿ ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ನಿಗಮ ಹಾಗೂ ಮಂಡಳಿಯು ಫಲಾನುಭವಿಯಿಂದ ವಸೂಲಾತಿ ಮಾಡಿಕೊಳ್ಳತಕ್ಕದ್ದು.

4. ಕೈಗಾರಿಕಾ ನಿವೇಶನವನ್ನು 10 ವರ್ಷಗಳ ಅವಧಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವುದು ಹಾಗೂ ಈ ಅವಧಿಯಲ್ಲಿ ವರ್ಗಾಯಿಸಲು ಸಾಧ್ಯವಿಲ್ಲ.

5. ನಿವೇಶನ (ಎ&ಬಿ ಶೆಡ್ ಸೇರಿ) ನೀಡುವ ದರದಲ್ಲಿ 75% ರಷ್ಟು ಅಥವಾ ಗರಿಷ್ಟ ರೂ. 2.00 ಕೋಟಿ ಸಹಾಯಧನ ಮಿತಿಯೊಳಗೆ ಯಾವುದು ಕಡಿಮೆಯೋ ಅದನ್ನು ನೀಡುವುದು. ಸಹಾಯಧನ ಹೊರತುಪಡಿಸಿ ಉಳಿದ ವೆಚ್ಚವನ್ನು ಫಲಾನುಭವಿಗಳು ಭರಿಸುವುದು. ಸದರಿ ಸೌಲಭ್ಯವನ್ನು ಎಸ್.ಸಿ/ಎಸ್.ಟಿ ಉದ್ದಿಮೆದಾರರಿಗೆ ಮೀಸಲಿರಿಸಿರುವ ಮಳಿಗೆಗಳಿಗೂ ವಿಸ್ತರಿಸುವುದು.

6. ಒಂದು ಉದ್ಯಮಿಗೆ ಗರಿಷ್ಠ 2 ಎಕರೆ ಕೈಗಾರಿಕಾ ನಿವೇಶನಕ್ಕೆ ಶೇ.75 ರಂತೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವುದು. ಒಬ್ಬರೇ ಉದ್ಯಮಿಯು ಹಲವು ಕಂಪನಿಗಳಿಗೆ ಪ್ರವರ್ತಕರಾಗಿದ್ದಲ್ಲಿ, ಒಂದು ಬಾರಿ ಮಾತ್ರ ಈ ಸೌಲಭ್ಯ ನೀಡುವುದು ಮತ್ತು ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಈ ಸೌಲಭ್ಯ ನೀಡುವುದು.

7. 75% ರಷ್ಟು ಸಹಾಯಧನದ ಯೋಜನೆಯು ಹೊಸದಾಗಿ ಕೈಗಾರಿಕಾ ನಿವೇಶನ ಹಂಚಿಕೆ ಮಾಡುವ ಪ್ರಕರಣಗಳಿಗೆ ಅನ್ವಯಿಸುತ್ತದೆ. ಆದರೆ, 2019-20ನೇ ಸಾಲಿನಲ್ಲಿ 50% ಸಹಾಯಧನ ಯೋಜನೆಯಡಿ ಈಗಾಗಲೇ ಕೈಗಾರಿಕಾ ನಿವೇಶನಗಳನ್ನು ಪಡೆದು ನಿಯಮಾನುಸಾರ ಒಡಂಬಡಿಕೆ ಮತ್ತು ಪಾವತಿ ಇತ್ಯಾದಿ ಮಾಡಿರುವ ಪ್ರಕರಣಗಳನ್ನು ಅದೇ ಮಿತಿಯಲ್ಲಿ ಮುಂದುವರೆಸುವುದು.

8. ಭೂ ಸಹಾಯಧನ ಹೊರತುಪಡಿಸಿದ ಇತರೆ ಸಹಾಯಧನ /ರಿಯಾಯಿತಿಗಳನ್ನು ಚಾಲ್ತಿಯಲ್ಲಿರುವ ಕೈಗಾರಿಕಾ ನೀತಿಯ ಪ್ರಕಾರ ನೀಡುವುದು.

ಇಲಾಖೆಯು/ ಜಾರಿಗೊಳಿಸುವ ಸಂಸ್ಥೆಯು ಎಸ್ ಸಿಪಿ/ಟಿಎಸ್ ಪಿ ಯೋಜನೆಯಡಿ ಸದರಿ ಯೋಜನೆಗೆ ಆಯಾ ವರ್ಷ ಲಭ್ಯವಿರುವ ಆಯವ್ಯಯಕ್ಕೆ ಅನುಗುಣವಾಗಿ ಫಲಾನುಭವಿ ಘಟಕಗಳ ಸಂಖ್ಯೆಯನ್ನು ನಿರ್ಬಂಧಿಸುವುದು ಮತ್ತು ಮುಂಬರುವ ವರ್ಷಗಳಲ್ಲಿ ಆಯವ್ಯಯವನ್ನು ನಿರೀಕ್ಷಿಸಿ ಸದರಿ ಯೋಜನೆಗೆ ವೆಚ್ಚ (committed liability) ಉಂಟುಮಾಡಬಾರದು. ಈ ಕುರಿತು ಪ್ರತ್ಯೇಕ ಮಾನದಂಡಗಳನ್ನು ಹೊರಡಿಸಲಾಗುವುದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD 196 EXP-1/19, ದಿನಾಂಕ: 04.01.2019 ರಲ್ಲಿ ಷರತ್ತುಗಳೊಂದಿಗೆ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Rlatha

**[ಆರ್.ಲತಾ]**
**ಪೀಠಾಧಿಕಾರಿ [ಸಪ್ರಕೈ],**
**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.**

**ಇವರಿಗೆ:**

**ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ ಕಳುಹಿಸಲಾಗಿದೆ. ತದನಂತರ, ಪ್ರಕಟಗೊಂಡ ಸಂಚಿಕೆಗಳ 25 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.**

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು-01.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ ,ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-01
6. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಎಂ ಎಸ್ ಎಂ ಇ, ಗಣಿ ಮತ್ತು ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-01.
7. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು-01.
8. ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
9. ನಿರ್ದೇಶಕರು (ಎಂ.ಎಸ್.ಎಂ.ಇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
10. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB), ರಾಷ್ಟ್ರೋತ್ಥಾನ ಪರಿಷತ್ ಭವನ, ನೃಪತುಂಗ ರಸ್ತೆ, ಬೆಂಗಳೂರು-01.

11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (KSSIDC), ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.

10. ಹಿರಿಯ ನಿರ್ದೇಶಕರು (ಪಿಎಫ್‌ಆರ್), ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.
11. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು-1.
12. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು-01.
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು-01.
14. ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-01.(ಮಲ್ಟಿಗ್ರಾಫ್ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸುವ ಸಲುವಾಗಿ)
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.